**37** ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

ಸಿ.ಸಿ. ನಂ. **9842/2016**

ಪ್ರಾ.ಸಃ **1**

| | |
|---|---|
| ಸಾಕ್ಷಿದಾರರ ಹೆಸರು | ಪೃಥ್ವಿರಾಜ್ ಕೆ |
| ತಂದೆಯ ಹೆಸರು | ಕೆಂಪಯ್ಯ |
| ವಯಸ್ಸು | 37 ವರ್ಷ |
| ಉದ್ಯೋಗ | ಹೆಚ್.ಸಿ. ನಂ. 10660 |
| ವಿಳಾಸ | ಜಯನಗರ ,ಬೆಂಗಳೂರು. |
| ಪ್ರ. ವ. ಬೋ ದಿನಾಂಕ | 21/05/2022 |

ದಂ. ಪ್ರ. ಸಂ. ಕಲಂ **299** ರಡಿಯಲ್ಲಿ ಸಾಕ್ಷಿಯ ಮುಖ್ಯ ವಿಚಾರಣೆಃ ಮಾನ್ಯ ಹಿ.ಸ.ಸ. ಅ ರವರಿಂದಃ

ನಾನು ಸುಮಾರು ಒಂದು ವರ್ಷಗಳಿಂದ ಜಯನಗರ ಪೊ.ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕೆಲಸ ಮಾಡಿಕೊಂಡಿದ್ದೇನೆ. ದಿ. 16/10/2021 ರಂದು ಈ ಪ್ರಕರಣದಲ್ಲಿ ನ್ಯಾಯಲಯಕ್ಕೆ ಹಾಜರಾಗದೇ ತಲೆಮರಿಸಿಕೊಂಡಿರುವ ಒಂದನೇ ಆರೋಪಿ ಉಮೇಶ್ ಎರಡನೇ ಆರೋಪಿ ರೋಷನ್ ಎಂಬುವರ ವಿರುದ್ದ ಪ್ರೋಕ್ಲಮೇಷನ್ ಜಾರಿ ಮಾಡಲು ಕರ್ತವ್ಯಕ್ಕೆ ನೇಮಕ ಮಾಡಿದ್ದು ಅದರಂತೆ ನಾನು ದಿ. 16/10/2021 ರಂದು ಆರೋಪಿತರು ಕೆಲಸ ಮಾಡುತ್ತಿದ್ದ ಕನಕಪುರ ರಸ್ತೆ, ಎಲಚೇನ ಹಳ್ಳಿ ಮೆಟ್ರೋ ಸ್ಟೇಷನ್ ಹತ್ತಿರ ಇದ್ದ ವೈಷ್ಣವಿ ಲಾಡ್ಜ್ ಬಳಿ ಹೋಗಿ ಆರೋಪಿತರ ಬಗ್ಗೆ ವಿಚಾರ ಮಾಡಲಾಗಿ ಯಾವುದೇ ಮಾಹಿತಿ ತಿಳಿದುಬಂದಿರುವುದಿಲ್ಲ. ಆದ್ದರಿಂದ ಸದರಿ ಆರೋಪಿತರು ಎಲ್ಲಿಯಾದರೂ ಕಂಡು ಬಂದಲ್ಲಿ ಆತನ ಬಗ್ಗೆ ಮಾಹಿತಿಯನ್ನು ಹತ್ತಿರದ ಪೊಲೀಸರಿಗೆ ತಿಳಿಸುವಂತೆ ಸಾರ್ವಜನಿಕರನ್ನು ಉದ್ದೇಶಿಸಿ ನಾನು ಏರುಧ್ವನಿಯಲ್ಲಿ ಕೂಗಿ ಹೇಳಿ ಪ್ರಚಾರ ಪಡಿಸಿರುತ್ತೇನೆ. ಮತ್ತು ಪ್ರೋಕ್ಲಮೇಷನ್ ಆದೇಶವನ್ನು ಲಾಡ್ಜ್‌ನ ಗೋಡೆ ಮತ್ತು ವಿದ್ಯುತ್ ಕಂಬಗಳಿಗೆ ಸಾರ್ವಜನಿಕರಿಗೆ ಎದ್ದು ಕಾಣುವ ಹಾಗೆ ಅಂಟಿಸಿರುತ್ತೇನೆ. ಈ ಬಗ್ಗೆ ಸದರಿ ಸ್ಥಳದ ಪ್ರೋಕ್ಲಮೇಷನ್ ಪಂಚನಾಮೆಯನ್ನು ಪಂಚರಾದ ಸತೀಶ್ ಮತ್ತು ಶಿವಪ್ಪ ಎನ್ನುವವರ ಸಮಕ್ಷಮ ಮಧ್ಯಾಹ್ನ 1.00 ರಿಂದ 02.30

ಗಂಟೆ ಸಮಯದಲ್ಲಿ  ಪಂಚನಾಮೆ ಮಾಡಿದೆ. ಈಗ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ಮೇಲ್ಕಂಡ ಆರೋಪಿತರ ಹೆಸರಿನಲ್ಲಿ ಯಾವುದೇ ಸ್ದಿರ ಆಸ್ತಿ ಮತ್ತು ಚರ ಆಸ್ತಿ ಇದೆಯೇ ಎಂಬ ಬಗ್ಗೆ ಬಿಬಿಎಂಪಿ ಕಂದಾಯ ಅಧಿಕಾರಿಗಳಿಗೆ ಮಾಹಿತಿ ಕೋರಿದ್ದು ಅದರಂತೆ ಆರೋಪಿತನ ಹೆಸರಿನಲ್ಲಿ ಯಾವುದೇ ಸ್ತಿರ ಮತ್ತು ಚರ ಆಸ್ತಿ ಕಂಡುಬಂದಿರುವುದಿಲ್ಲ ಎಂದು ಸಹಾಯಕ ಕಂದಾಯ ಅಧಿಕಾರಿಗಳು ಒಂದು ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

ಮರುವಿಚಾರಣೆಃ    ಇಲ್ಲ

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ